1506847

**ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

FDA

# 2017

**ಪ್ರಶ್ನೆ ಪುಸ್ತಿಕೆ ಶ್ರೇಣಿ**

**C**

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಜ್ಞಾನ

**ಸಮಯ : $1\frac{1}{2}$ ಗಂಟೆಗಳು** | **ವಿಷಯ ಸಂಕೇತ : 167** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಒ.ಎಂ.ಆರ್. ಉತ್ತರಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ಶ್ರೇಣಿ A, B, C ಅಥವಾ D ಅನ್ನು ವಿಷಯ ಸಂಕೇತ ಮತ್ತು ನೋಂದಣಿ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಒ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ |
|---|
| |

4. ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು**. ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ**. ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
9. **ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು. ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳಲ್ಲಿ ಯಾವುದೇ ಗೊಂದಲಗಳಿದ್ದರೂ ಆಂಗ್ಲಭಾಷೆಯ ಪ್ರಶ್ನೆಗಳೇ ಅಂತಿಮವಾಗಿರುತ್ತದೆ.**

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್‌ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :** English version of the instructions is printed on the back cover of this booklet.*



www.shikarat.com

1. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ :

*ಹೇಳಿಕೆ 1 :* ಎಲ್ಲ ಕೋಳಿಗಳು ಹಕ್ಕಿಗಳು.

*ಹೇಳಿಕೆ 2 :* ಕೆಲವು ಕೋಳಿಗಳು ಹೆಣ್ಣು ಕೋಳಿಗಳು.

*ಹೇಳಿಕೆ 3 :* ಹೆಣ್ಣು ಹಕ್ಕಿಗಳು ಮೊಟ್ಟೆ ಇಡುತ್ತವೆ.

ಮೇಲಿನ 3 ಹೇಳಿಕೆಗಳು ವಾಸ್ತವ ಸಂಗತಿಗಳಾದರೆ ಈ ಕೆಳಗಿನವುಗಳಲ್ಲಿ ಯಾವ ಹೇಳಿಕೆಗಳು ಸಹ ವಾಸ್ತವ ಸಂಗತಿಗಳಾಗಿದೆ ?

I. ಎಲ್ಲ ಹಕ್ಕಿಗಳೂ ಮೊಟ್ಟೆ ಇಡುವವು.

II. ಹೆಣ್ಣು ಕೋಳಿಗಳು ಹಕ್ಕಿಗಳು.

III. ಕೆಲವು ಕೋಳಿಗಳು ಹೆಣ್ಣಲ್ಲ.

ಕೆಳಗೆ ನೀಡಿರುವ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರಗಳನ್ನು ಆರಿಸಿ :

(1) II ಮಾತ್ರ

(2) II ಮತ್ತು III ಮಾತ್ರ

(3) I, II ಮತ್ತು III

(4) I, II ಮತ್ತು III ಯಾವುದೂ ಸರಿಯಲ್ಲ

2. ಮೂರು ಬಗೆಯ ಕಾಫಿ ಬಿತ್ತಗಳು – ಕಾಫಿ ಅರೆಬಿಕಾ, ಕಾಫಿ ರೊಬಸ್ಟಾ ಮತ್ತು ಸ್ಥಳೀಯ ಬಿತ್ತಗಳು ಅನುಕ್ರಮವಾಗಿ ₹ 95/kg, ₹ 100/kg ಮತ್ತು ₹ 70/kg ಯ ಬೆಲೆಯವು, ಅನುಕ್ರಮವಾಗಿ ಇವನ್ನು ಎಷ್ಟೆಷ್ಟು ಬೆರೆಸಿ 100 kg ಮಾಡಿ ₹ 90/kg ಬೆಲೆ ಉಂಟುಮಾಡಬಹುದು ? ರೋಬಸ್ಟಾ ಮತ್ತು ಸ್ಥಳೀಯ ಬಿತ್ತಗಳ ಪ್ರಮಾಣ ಸಮನಾಗಿರಬೇಕು

(1) 70, 15, 15

(2) 60, 20, 20

(3) 40, 30, 30

(4) 50, 25, 25

3. ಅಂತರರಾಷ್ಟ್ರೀಯ ಹಣಕಾಸು ನಿಧಿ (International Monetary Fund) ಯಲ್ಲಿ ಮತದಾನದ ಹಕ್ಕುಗಳನ್ನು ಇವುಗಳ ಆಧಾರದ ಮೇಲೆ ಹಂಚಿಕೆಯಾಗಿದೆ :

(1) ಒಂದು ದೇಶ ಒಂದು ಮತ

(2) ವಿಶ್ವದ ಆದಾಯದಲ್ಲಿ ಆಯಾ ದೇಶಗಳ ಆದಾಯದ ಪಾಲಿಗನುಗುಣವಾದ ಅನುಸಾರದ ಮೇರೆಗೆ

(3) ಪ್ರತಿಯೊಂದು ದೇಶವೂ ನೀಡಿರುವ ಕೊಡುಗೆಗಳ ಅನುಪಾತಕ್ಕನುಗುಣವಾಗಿ

(4) ಕಾಲ ಕಾಲಕ್ಕೆ ಆಯಾ ದೇಶಗಳಿಗೆ ನೀಡಲಾಗಿರುವ ಕೋಟಾದ ಅನುಪಾತಕ್ಕನುಗುಣವಾಗಿ

4. ದೀನ ದಯಾಳ್ ಉಪಾಧ್ಯಾಯ ಗ್ರಾಮಜ್ಯೋತಿ ಯೋಜನೆಯ ಗುರಿ

A. ಎಲ್ಲ ಹಳ್ಳಿಗಳ ವಿದ್ಯುದೀಕರಣ

B. ನಷ್ಟ ತಗ್ಗಿಸಲು ಮೀಟರ್ ಇಲ್ಲದೆಡೆ ಮೀಟರ್ ಅಳವಡಿಸುವುದು

C. ಫೀಡರ್‌ಗಳನ್ನು ಪ್ರತ್ಯೇಕಿಸಿ ಕೃಷಿಗೆ ಸಾಕಷ್ಟು ವಿದ್ಯುತ್ ಒದಗಿಸಿ, ಇತರ ವರ್ಗಕ್ಕೆ ನಿರಂತರ ವಿದ್ಯುತ್ ಪೂರೈಸುವುದು

D. ಉಪ ಪ್ರಸರಣ ಮತ್ತು ವಿತರಣ ಜಾಲವನ್ನು ಸುಧಾರಿಸಿ ಪೂರೈಕೆಯ ಗುಣಮಟ್ಟ ಮತ್ತು ವಿಶ್ವಾಸಾರ್ಹತೆ ಹೆಚ್ಚಿಸುವುದು

ಕೆಳಗೆ ನೀಡಿರುವ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರಗಳನ್ನು ಆರಿಸಿ :

(1) A ಮಾತ್ರ

(2) A, B, C ಮತ್ತು D

(3) B ಮತ್ತು C

(4) A ಮತ್ತು B

5. 1857 ರ ಬಂಡಾಯ ನಡೆಯದ ಪ್ರದೇಶವು

(1) ಅವಧ್

(2) ಮದ್ರಾಸ್

(3) ಮಧ್ಯ ಪ್ರದೇಶ

(4) ಪೂರ್ವ ಪಂಜಾಬು



www.shikarat.com

6. ಭಾರತದಲ್ಲಿ ಔಪಚಾರಿಕ ವಲಯದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಅಡ್ಡಿಗಳೇನು ?

A. ಔಪಚಾರಿಕ ಉದ್ಯೋಗಿಗಳಿಗೆ ವಿನಿಯಮ ಪ್ರೇರಿತ ತೆರಿಗೆ.

B. ಕೆಲಸ ಹಾಗು ಉದ್ಯೋಗಿಗಳ ಮಧ್ಯ ಇರುವ ಪ್ರತ್ಯೇಕತೆ.

C. ಅಸಮರ್ಥಕ ಮಾನವ ಸಂಪನ್ಮೂಲ ಹರಿವು.

D. ಮಾನವ ಬಂಡವಾಳದಲ್ಲಿ ಹೂಡಿಕೆ ಕೊರತೆ.

ಕೆಳಗೆ ನೀಡಿರುವ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರಗಳನ್ನು ಆರಿಸಿ :

(1) A ಮಾತ್ರ

(2) B ಮತ್ತು C ಮಾತ್ರ

(3) A, B ಮತ್ತು D ಮಾತ್ರ

(4) A ಮತ್ತು B ಮಾತ್ರ

7. ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಮತ್ತು ವಿಶ್ವ ಬ್ಯಾಂಕುಗಳ ಕೇಂದ್ರ ಸ್ಥಾನ ಇಲ್ಲಿ ನೆಲೆಯಾಗಿದೆ.

(1) IMF – ಜಿನೀವಾ,
ವಿಶ್ವ ಬ್ಯಾಂಕು – ಮೊಂಟ್ರಿಯಲ್

(2) IMF – ಜಿನೀವಾ,
ವಿಶ್ವ ಬ್ಯಾಂಕು – ವಿಯೆನ್ನಾ

(3) IMF – ನ್ಯೂಯಾರ್ಕ್,
ವಿಶ್ವ ಬ್ಯಾಂಕು – ಜಿನೇವಾ

(4) IMF – ವಾಷಿಂಗ್ಟನ್ ಡಿಸಿ,
ವಿಶ್ವ ಬ್ಯಾಂಕು – ವಾಷಿಂಗ್ಟನ್ ಡಿಸಿ

8. ಭಾರತ ಹಾಗೂ ಪಾಕಿಸ್ತಾನ ನಡುವ "ಗಂಗಾಜಲ ಒಪ್ಪಂದ 1960" ಕುರಿತಂತೆ, ಈ ಪೈಕಿ ಯಾವುದು ಸರಿಯಲ್ಲ?

(1) ಭಾರತಕ್ಕೆ ಪೂರ್ವದ ನದಿಗಳಾದ ಸಟ್ಲೆಜ್, ಬಿಯಾಸ್ ಮತ್ತು ರಬಿ ನದಿಗಳ ನೀರನ್ನು ಅನಿರ್ಬಂಧಿತವಾಗಿ ಬಳಕೆ ಮಾಡುವ ಹಕ್ಕು ಇದೆ.

(2) ಪಾಕಿಸ್ತಾನಕ್ಕೆ ಪಶ್ಚಿಮದ ನದಿಗಳಾದ ಸಿಂಧೂ, ಚೀನಾಬ್ ಮತ್ತು ಝೀಲಮ್ ನದಿಗಳ ಅನಿರ್ಬಂಧಿತ ಬಳಕೆ ಮಾಡುವ ಹಕ್ಕಿದೆ.

(3) ಭಾರತಕ್ಕೆ ಭಾರತದಲ್ಲಿ ಹುಟ್ಟುವ ಹಾಗು ಪಾಕಿಸ್ತಾನಕ್ಕೆ ಹರಿವ ಆರು ನದಿಗಳ ನದಿ ಉಸುಕನ್ನು ಬಳಕೆ ಮಾಡುವ ಹಕ್ಕು ಇದೆ.

(4) ಭಾರತ ಮತ್ತು ಪಾಕಿಸ್ತಾನಗಳೆರಡಕ್ಕೂ ನದಿ ಮಾಲಿನ್ಯ ತಡೆಗಟ್ಟುವ ಹೊಣೆಗಾರಿಕೆ ಇದೆ.

9. ದೆಹಲಿಯಿಂದ ದೇವಗಿರಿಗೆ (ದೌಲತಾಬಾದ್) ರಾಜಧಾನಿಯನ್ನು ವರ್ಗಾವಣೆ ಮಾಡಿದ್ದನ್ನು ಕುರಿತು ಯಾವ ಇತಿಹಾಸಕಾರ ಕೆಳಗಿನ ಹೇಳಿಕೆಯನ್ನು ನೀಡಿದ್ದು ?
"ಪೂರ್ಣ ಅವನತಿ ಎಂದರೆ ಆ ನಗರದ ಕಟ್ಟಡಗಳಲ್ಲಿ ಒಂದು ಬೆಕ್ಕು ಅಥವಾ ನಾಯಿಯೂ ಉಳಿದಿಲ್ಲ"

(1) ಫಿರಿಶ್ತಾ

(2) ಬರಾನಿ

(3) ಇಬನ ಬಟೂಟ

(4) ಎಲ್ಫಿನ್‌ಸ್ಟೋನ್

10. ಈ ಕೆಳಗಿನವರಲ್ಲಿ ಯಾವ ದೊರೆಗಳು ಪಾರಿವಾಳ ಹಾರಾಟದ ಆಟಕ್ಕೆ "ಇಷ್ಕ್-ಬಾಝಿ" ಎಂಬ ಪದವನ್ನು ನೀಡಿದವರು ಯಾರು ?

(1) ಔರಂಗ್‌ಜೇಬ್

(2) ಅಲ್ಲಾವುದ್ದೀನ್ ಖಿಲ್ಜಿ

(3) ಅಕ್ಬರ್

(4) ಬಾಬರ್



www.shikarat.com

11. ಬಹಮನಿ ರಾಜ್ಯಸ್ಥಾಪನೆಗೆ ಕಾರಣವಾದ ಅಂಶಗಳು ಕೆಳಗಿನವುಗಳಲ್ಲಿ ಈ ಪೈಕಿ ಯಾವುವು ?

(1) ಕಲ್ಯಾಣಿ ಚಾಲುಕ್ಯರ ರಾಜ್ಯವು ಒಡೆದು ಹೋಳಾಗಿದ್ದು

(2) ದಕ್ಷಿಣದಲ್ಲಿ ತೊಘಲಕ್ ಅಧಿಕಾರದ ವಿರುದ್ಧ ಸರಣಿ ಬಂಡಾಯಗಳು

(3) ಸೇನಾ ಬೆಂಬಲ ಮತ್ತು ಪ್ರೋತ್ಸಾಹವನ್ನು ದೆಹಲಿ ಸುಲ್ತಾನರು ನೀಡಿದ್ದು

(4) ಮಹಮದ ಬಿನ್ ತೊಘಲಕ್‌ನ ವಿರುದ್ಧ ಹೆಚ್ಚಿದ ಅತೃಪ್ತಿಯಿಂದ ವ್ಯಾಪಕವಾಗಿ ಹರಡಿದ ದಂಗೆಗಳ ಉಪಯೋಗ ಗಳನ್ನು ಪಡೆದ ಅಮ್ರಿನ I ನ ದಂಗೆ

12. ವಂಶಗಳು ಹಾಗೂ ರಾಜಧಾನಿಗಳನ್ನು ಹೊಂದಿಸಿ :

| | | | |
|---|---|---|---|
| A. | ಆದಿಲಾಷಾಹಿಗಳು | I. | ಅಹ್ಮದ್‌ನಗರ್ |
| B. | ಕುತುಬ್ ಷಾಹಿಗಳು | II. | ಬೀದರ್ |
| C. | ನಿಜಾಮ್ ಷಾಹಿಗಳು | III. | ಬಿಜಾಪುರ್ |
| D. | ಬರಿದ್ ಷಾಹಿಗಳು | IV. | ಗೋಲ್‌ಕೊಂಡ |

ಕೆಳಗೆ ನೀಡಿರುವ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರ ಆರಿಸಿ :

| | A | B | C | D |
|---|---|---|---|---|
| (1) | III | IV | I | II |
| (2) | I | III | II | IV |
| (3) | II | I | IV | III |
| (4) | I | II | III | IV |

13. ಕೆಳಗೆ ಕೊಟ್ಟಿರುವ ರಾಷ್ಟ್ರಗಳಲ್ಲಿ ಭಾರತವು ಯಾವ ರಾಷ್ಟ್ರದೊಂದಿಗೆ ಉದ್ದವಾದ ಅಂತರರಾಷ್ಟ್ರೀಯ ಗಡಿಯನ್ನು ಹೊಂದಿದೆ ?

(1) ನೇಪಾಳ್

(2) ಪಾಕಿಸ್ತಾನ್

(3) ಚೈನಾ

(4) ಬಾಂಗ್ಲಾದೇಶ

14. ಯಾವ ದೇಶ ದೊಂದಿಗೆ ಪೊಲ್ ಪಾಟ್, ಖ್ಮೇರ್ ರೋಜ್ ಮತ್ತು ಮಾನವ ಹತ್ಯೆ ಸಂಬಂಧಿಸಿದೆ ?

(1) ಕೊರಿಯಾ

(2) ಜಪಾನ್

(3) ಮ್ಯಾನ್‌ಮಾರ್ (ಬರ್ಮಾ)

(4) ಕಾಂಬೋಡಿಯಾ (ಕಂಪೂಚಿಯಾ)

15. ಅಂತರರಾಷ್ಟ್ರೀಯ ಹಣಕಾಸು ಆಯೋಗದಿಂದಾದ ಅಪಡೇಟೆಡ್ ವಿಶ್ವ ಆರ್ಥಿಕ ಹೊರನೋಟದ (WEO) ವರದಿಯ ಮೇರೆಗೆ 2017 ರ ಆರ್ಥಿಕ ವರ್ಷದ ಭಾರತೀಯ ಜಿ.ಡಿ.ಪಿ. ಬೆಳವಣಿಗೆ ಭವಿಷ್ಯ ದರವು

(1) 6·6%

(2) 7·1%

(3) 6·2%

(4) 6·5%

www.shikarat.com

16. ಕೇಂದ್ರ ಸರ್ಕಾರದಿಂದ ಸರ್ವ ಶಿಕ್ಷಾ ಅಭಿಯಾನಕ್ಕಾಗಿ ಯಾವ ಹೆಬ್ಬಾಗಿಲನ್ನು ನಿರ್ಮಿಸಲಾಯಿತು ?
(1) ಗ್ಯಾನ್ ಹೆಬ್ಬಾಗಿಲು
(2) ಉಜಾಲಾ ಹೆಬ್ಬಾಗಿಲು
(3) ವ್ಯಾಸಂಗ್ ಹೆಬ್ಬಾಗಿಲು
(4) ಶಗುನ್ ಹೆಬ್ಬಾಗಿಲು

17. ಯಾವ ರಾಜ್ಯದಲ್ಲಿ ಭಾರತದ ಮಂಗಳಮುಖಿಯರ (ಟ್ರಾನ್ಸ್ ಜೆಂಡರ್) ಮೊದಲನೇ ಶಾಲೆಯು ಸ್ಥಾಪಿತವಾಯಿತು ?
(1) ತಮಿಳು ನಾಡು
(2) ಕೇರಳ
(3) ಕರ್ನಾಟಕ
(4) ಆಂಧ್ರ ಪ್ರದೇಶ

18. ಈ ಕೆಳಗಿನವುಗಳಲ್ಲಿ ಯಾವ ಬ್ಯಾಂಕು ಜಂಟಿ ಮಾರುಕಟ್ಟೆ ಚಟುವಟಿಕೆಗಳನ್ನು ನಿರ್ವಹಿಸಲೋಸುಗ ಆನ್‌ಲೈನ್ ಹೆಬ್ಬಾಗಿಲು ಮ್ಯಾಜಿಕ್‌ಬ್ರಿಕ್ಸ್. ಕಾಂ ನೊಂದಿಗೆ ಸಹಯೋಗಿತ್ವವನ್ನು ಹೊಂದಿದೆ ?
(1) ICICI ಬ್ಯಾಂಕು
(2) ಪಂಜಾಬ್ ನ್ಯಾಷನಲ್ ಬ್ಯಾಂಕು
(3) HDFC ಬ್ಯಾಂಕು
(4) ಭಾರತೀಯ ಸ್ಟೇಟ್ ಬ್ಯಾಂಕು

19. ಭಾರತದ ಪರ್ಯಾಯ ದ್ವೀಪದಲ್ಲಿ ಟ್ಯಾಂಕು ನೀರಾವರಿಯ ಪದ್ಧತಿಯನ್ನು ಅಳವಡಿಸಿಕೊಳ್ಳಲು ಕೆಳಗಿನವುಗಳಲ್ಲಿ ಯಾವುದು ಕಾರಣವಾಗಿಲ್ಲ ?
(1) ಹೊಯ್ದಾಟದ ಪರಿಹಾರ ಮತ್ತು ಕಠಿಣ ಬಂಡೆಗಳು
(2) ಅಭೇದ್ಯ ಶಿಲಾಸ್ವರೂಪದಿಂದ ಕಡಿಮೆ ಮಳೆನೀರಿನ ಸೋಸುವಿಕೆ
(3) ಭಾರತದ ಪರ್ಯಾಯ ದ್ವೀಪದ ಬಹಳಷ್ಟು ನದಿಗಳು ಅವ್ಯಾಹತವಾದವು
(4) ಕೆಲವು ಪ್ರವಾಹಗಳು ಮಳೆಗಾಲದ ಅವಧಿಯಲ್ಲಿ ಸೆಳವುಗಳನ್ನು ಹೊಂದಿರುತ್ತವೆ

20. ಇತ್ತೀಚಿನ ಅನಾಣ್ಯೀಕರಣದ ನಂತರ, ಹಣರಹಿತ, ಡಿಜಿಟಲ್ ಮತ್ತು ವಿದ್ಯುನ್ಮಾನ ವ್ಯವಹಾರಗಳಿಂದ ನಡೆಸಲು ವಿವಿಧ ರಾಜ್ಯ ಸರ್ಕಾರಗಳು ಅಂತೆಯೇ ಕೇಂದ್ರ ಸರ್ಕಾರವೂ ಬಹಳ ಒತ್ತನ್ನು ನೀಡಿದ್ದು ಇಂತಹ ಯೋಜನೆಗಳಲ್ಲಿ ಒಂದಾದ 'ಡಿಜಿಟಲ್ ಡಾಕಿಯಾ' ಯೋಜನೆಯು ಯಾವ ರಾಜ್ಯದ್ದು ?
(1) ಮಧ್ಯ ಪ್ರದೇಶ್
(2) ರಾಜಸ್ಥಾನ
(3) ಕರ್ನಾಟಕ
(4) ಅಸ್ಸಾಂ

21. ಮಧ್ಯ ಪ್ರದೇಶದ ಇಂಡೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ಮುಂಬಯಿಯನ್ನು 5 ವಿಕೆಟಗಳಿಂದ ಸೋಲಿಸಿದ ನಂತರ ಯಾವ ಕ್ರಿಕೆಟ್ ತಂಡವು ತಮ್ಮ ಮೊದಲನೆಯ ರಣಜಿ ಟ್ರೋಫಿಯನ್ನು 2016 – 17 ನೇ ಸಾಲಿನಲ್ಲಿ ಗಳಿಸಿತು
(1) ಛತ್ತೀಸ್‌ಘಡ್
(2) ಗುಜರಾತ್
(3) ಕರ್ನಾಟಕ
(4) ತಮಿಳು ನಾಡು

22. ಈ ಕೆಳಗಿನವುಗಳಲ್ಲಿ ಯಾವ ನಾಲೆಗಳು ಬೆಳಗಾವಿ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳ ಪ್ರಧಾನ ಭಾಗಗಳಿಗೆ ನೀರಾವರಿಯನ್ನು ಒದಗಿಸುತ್ತವೆ ?
(1) ವಿಶ್ವೇಶ್ವರಯ್ಯ ನಾಲೆ
(2) ತಂಡುಲಾ ನಾಲೆ
(3) ಮೆಟ್ಟೂರು ನಾಲೆ
(4) ಮಲಪ್ರಭಾ ಯೋಜನೆ



www.shikarat.com

23. ಈ ಕೆಳಗಿನ ಹೇಳಿಕೆಗಳನ್ನು ಉತ್ತರ ಭಾರತದ ಚಳಿಗಾಲದ ಋತುಮಾನದಲ್ಲಿ ಶೀತದ ಅಲೆಗಳಿಗೆ ಸಂಬಂಧಿಸಿದಂತೆ ಪರಿಗಣಿಸಿ :

A. ಇಲ್ಲಿ ಸಮುದ್ರದ ಪ್ರಭಾವದ ಕೊರತೆಯಿದೆ.

B. ಉತ್ತರ ಭಾರತವು ಹಿಮಾಲಯ ಪ್ರದೇಶಕ್ಕೆ ಸಮೀಪವಾಗಿದೆ.

C. ಗಾಳಿ ರಾಶಿಯು ಧ್ರುವೀಯ ಪ್ರಾಂತ್ಯದಿಂದ ಉತ್ತರ ಭಾರತಕ್ಕೆ ಆಗಮಿಸುತ್ತದೆ.

ಈ ಹೇಳಿಕೆಗಳಲ್ಲಿ ಯಾವುದು/ವು ಸರಿ ?

(1) A ಮಾತ್ರ
(2) B ಮತ್ತು C ಮಾತ್ರ
(3) A ಮತ್ತು C ಮಾತ್ರ
(4) A ಮತ್ತು B ಮಾತ್ರ

24. ರಾಷ್ಟ್ರೀಯ ಆಹಾರ ಸುರಕ್ಷತಾ ಆಯೋಗದ ಗುರಿಯೆಂದರೆ ಕೆಲವು ನಿರ್ದಿಷ್ಟ ಬೆಳೆಗಳ ಉತ್ಪಾದನೆಯನ್ನು ಕ್ಷೇತ್ರ ವಿಸ್ತರಣೆಯ ಮೂಲಕ ಹೆಚ್ಚಿಸುವುದು ಮತ್ತು ಸುಸ್ಥಿರತೆ ರೀತಿಯಲ್ಲಿ ಉತ್ಪಾದಕತೆಯ ಹೆಚ್ಚಳವನ್ನು ರಾಷ್ಟ್ರದ ಗುರ್ತಿಸಲಾದ ಜಿಲ್ಲೆಗಳಲ್ಲಿ ಹೆಚ್ಚಿಸುವುದಾಗಿದೆ ಆ ಬೆಳೆಗಳು ಯಾವುವು ?

(1) ಅಕ್ಕಿ ಮತ್ತು ಗೋಧಿ
(2) ಅಕ್ಕಿ, ಗೋಧಿ ಮತ್ತು ಬೇಳೆ ಕಾಳುಗಳು
(3) ಅಕ್ಕಿ, ಗೋಧಿ, ಬೇಳೆಕಾಳುಗಳು ಮತ್ತು ಎಣ್ಣೆ ಬೀಜಗಳು
(4) ಅಕ್ಕಿ, ಗೋಧಿ, ಬೇಳೆಕಾಳುಗಳು, ಎಣ್ಣೆ ಬೀಜಗಳು ಮತ್ತು ತರಕಾರಿಗಳು

25. ಅಕ್ಬರ್ ಹಶೆಮಿ ರಫ್‌ಸೆನ್ಜಾನಿಯವರು ಇತ್ತೀಚೆಗೆ ನಿಧನ ಹೊಂದಿದ್ದು, ಇವರು ಯಾವ ದೇಶದ ಹಿಂದಿನ ರಾಷ್ಟ್ರಾಧ್ಯಕ್ಷರಾಗಿದ್ದರು ?

(1) ಸಿರಿಯಾ
(2) ಇರಾಕ್
(3) ಇರಾನ್
(4) ಇಸ್ರೇಲ್

26. ಭಾರತದ ಮೊದಲ ಅಂತರರಾಷ್ಟ್ರೀಯ ಸ್ಟಾಕ್ ವಿನಿಮಯ ಕೇಂದ್ರವಾದ "ಭಾರತೀಯ ಅಂತರರಾಷ್ಟ್ರೀಯ ವಿನಿಮಯ" ಕೇಂದ್ರವು ಯಾವ ನಗರದಲ್ಲಿ ಸ್ಥಾಪಿತವಾಯಿತು ?

(1) ಲಕ್ನೋ
(2) ಗಾಂಧಿನಗರ
(3) ಬೆಂಗಳೂರು
(4) ಮುಂಬಯಿ

27. ಚಲನಚಿತ್ರ ತಾರೆಗಳಾದ ರೋಯನ್ ಗೋಸ್ಲಿಂಗ್ ಮತ್ತು ಎಮ್ಮಾ ಸ್ಟೋನ್ ಮತ್ತು ಡೇಮಿಯನ್ ಚಜಾಲಾರಿಂದ ನಿರ್ದೇಶಿತವಾದ ಏಕೈಕ ಚಲನಚಿತ್ರವು 74ನೇ ಗೋಲ್ಡನ್ ಗ್ಲೋಬ್ ಅವಾರ್ಡ್ಸ್ 2017 ರಲ್ಲಿ ಬಹಳಷ್ಟು ಪ್ರಶಸ್ತಿಗಳನ್ನು ಗಳಿಸಿದ ದಾಖಲೆಗಳನ್ನು ನಿರ್ಮಿಸಿದ್ದು ಇದು

(1) ಲಾ ಲಾ ಲ್ಯಾಂಡ್
(2) ಮೂನ್ ಲೈಟ್
(3) 20 ನೇ ಶತಮಾನದ ಮಹಿಳೆ
(4) ಸಮುದ್ರದಿಂದಾದ ಮ್ಯಾಂಚೆಸ್ಟರ್

28. ಅಮೇರಿಕಾದ ಮಹತ್ತರ ಗೀತ ಪರಂಪರೆಯೊಳಗೆ ಹೊಸ ಕಾವ್ಯಾತ್ಮಕ ಅಭಿವ್ಯಕ್ತಿಗಳನ್ನು ಸೃಷ್ಟಿಸಿದುದಕ್ಕಾಗಿ ಹೆಸರಾದ 2016 ನೇ ಸಾಲಿನ ಸಾಹಿತ್ಯದ ನೋಬೆಲ್ ಪಾರಿತೋಷಕವನ್ನು ಗಳಿಸಿದವರು

(1) ಬಾಬ್ ಡೈಲಾನ್
(2) ಹರುಕಿ ಮುರಾಕಾಮಿ
(3) ಜೋಯ್ಸ್ ಕ್ಯಾರೊಲ್
(4) ಅಡೊನಿಸ್

29. ಎಡ್ವರ್ಡ್ ಸ್ನೋಡೆನ್‌ರಿಗೆ ಯಾವ ದೇಶದಿಂದ ಆಸರೆ ದೊರಕಿತು ?

(1) ರಷ್ಯಾ
(2) ಹಾಂಗ್‌ಕಾಂಗ್
(3) ಫ್ರಾನ್ಸ್
(4) ಚೈನಾ



www.shikarat.com

**30.** "ವೈಸರಾಯರ ಅರಮನೆಯ ಮೆಟ್ಟಿಲುಗಳ ಮೇಲೆ ಗಾಂಧೀಜಿಯವರು ರಾಜಿಗಾಗಿ ನಿಂತಿರುವ ತೇಜೋವಧೆಯ ಶೋಚನೀಯ ವಾಕರಿಕೆ ಬರಿಸುವ ದೃಶ್ಯ ..... "ರಾಜ ಚಕ್ರವರ್ತಿಗಳ" ಪ್ರತಿನಿಧಿಗಳೊಂದಿಗೆ ಎಂಬ ಸಂವಾದಿ ಪದಗಳೊಂದಿಗೆ." ಹೀಗೆ ನುಡಿದವರು ಯಾರು ?

(1) ಕ್ಲೆಮೆಂಟ್ ಅಟ್ಲೀ

(2) ವಿಲಿಯಮ್ ಡಿಗ್ಬಿ

(3) ವಿನ್‌ಸ್ಟನ್ ಚರ್ಚಿಲ್

(4) ಸ್ಟೈಫೋರ್ಡ್ ಕ್ರಿಪ್ಸ್

**31.** ರಬ್ಬರ್ ಉತ್ಪಾದನೆಯಲ್ಲಿ ಭಾರತದ ಯಾವ ರಾಜ್ಯವು ಮುಂಚೂಣಿಯಲ್ಲಿದೆ ?

(1) ತಮಿಳು ನಾಡು

(2) ಕೇರಳ

(3) ಕರ್ನಾಟಕ

(4) ಗುಜರಾತ್

**32.** I ಪಟ್ಟಿಯಲ್ಲಿನ ಜಲವಿದ್ಯುತ್ ಕೇಂದ್ರ ಗಳೊಂದಿಗೆ II ಪಟ್ಟಿಯಲ್ಲಿನ ನದಿಗಳನ್ನು ಹೊಂದಿಸಿರಿ :

| *ಪಟ್ಟಿ I* (ಜಲವಿದ್ಯುತ್ ಕೇಂದ್ರ) | *ಪಟ್ಟಿ II* (ನದಿಗಳು) |
|---|---|
| A. ಹಿರಾಕುಡ್ | I. ರಿಹಾಂದ್ |
| B. ವಾಲ್ಮೀಕಿನಗರ್ | II. ಗಂಡಕ್ |
| C. ಪಿಪ್ರಿ | III. ಚಂಬಲ್ |
| D. ಕೋಟ | IV. ಮಹಾನದಿ |

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

| | A | B | C | D |
|---|---|---|---|---|
| (1) | IV | II | I | III |
| (2) | IV | III | I | II |
| (3) | II | III | I | IV |
| (4) | III | II | IV | I |

www.shikarat.com

33. ಒಂದು ನ್ಯೂಕ್ಲಿಯರ್ ರಿಯಾಕ್ಟರ್‌ನಲ್ಲಿನ ಭಾರ ಜಲದ ಕಾರ್ಯವೆಂದರೆ :

(1) ನ್ಯೂಟ್ರಾನುಗಳ ವೇಗವನ್ನು ನಿಧಾನಗೊಳಿಸುವುದು

(2) ನ್ಯೂಟ್ರಾನುಗಳ ವೇಗವನ್ನು ಹೆಚ್ಚಿಸುವುದು

(3) ರಿಯಾಕ್ಟರ್‌ನ್ನು ತಂಪುಗೊಳಿಸುವುದು

(4) ನ್ಯೂಕ್ಲಿಯರ್ ಪ್ರತಿಕ್ರಿಯೆಗಳನ್ನು ನಿಲ್ಲಿಸುವುದು

34. ವಿಜ್ಞಾನ ಮತ್ತು ತಂತ್ರಜ್ಞಾನಕ್ಕಾಗಿ ನೀಡುವ ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿಯು ವಾರ್ಷಿಕವಾಗಿ ಇವರಿಂದ ನೀಡಲ್ಪಡುವುದು

(1) ಸಿ.ಎಸ್.ಐ.ಆರ್.

(2) ಐ.ಎಸ್.ಆರ್.ಓ.

(3) ಐ.ಐ.ಟಿ.

(4) ಟಿ.ಐ.ಎಸ್.ಎಸ್.

35. ಈ ಕೆಳಗಿನವುಗಳಲ್ಲಿ ಯಾವುದು ಸರಿ ?

(1) ಸಾಕ್ರಟೀಸನು ಪ್ಲೇಟೋನ ಶಿಷ್ಯನಾಗಿದ್ದನು

(2) ಪ್ಲೇಟೋನು ಸಾಕ್ರಟೀಸನ ಶಿಷ್ಯನಾಗಿದ್ದನು

(3) ಪ್ಲೇಟೋನು ಅರಿಸ್ಟಾಟಲ್‌ನ ಶಿಷ್ಯನಾಗಿದ್ದನು

(4) ಸಾಕ್ರಟೀಸ್ ಮತ್ತು ಪ್ಲೇಟೋರು ಅರಿಸ್ಟಾಟಲನ ಶಿಷ್ಯರಾಗಿದ್ದರು

36. "ಕ್ರಿಕೆಟ್ ಸಂಸ್ಥೆಯಲ್ಲಿ ಹುಲಿ" ಎಂದು ಗುರ್ತಿಸಲಾದ ಕ್ರಿಕೆಟ್ ಆಟಗಾರ ಮತ್ತು "ಪಟೌಡಿಯ ನವಾಬ" ಎಂದು ಕರೆಸಿಕೊಂಡವ

(1) ಸೈಫ್ ಅಲಿ ಖಾನ್

(2) ಮನ್ಸೂರ್ ಅಲಿ ಖಾನ್

(3) ಪಾಲಿ ಉಮ್ರೀಗರ್

(4) ಯೂಸುಫ್ ಖಾನ್

37. ಎಂ.ಎಫ್. ಹುಸೇನರನ್ನು ಹೀಗೆಂದೂ ಕರೆಯಲಾಗಿದೆ

(1) ಭಾರತದ ಮೈಕೆಲಾಂಜೆಲೋ

(2) ಭಾರತದ ಸಾಕ್ರಟೀಸ್

(3) ಭಾರತದ ಪ್ಲೇಟೋ

(4) ಭಾರತದ ಪಿಕಾಸೋ

38. ಅರ್ಜೆಂಟೈನಾ ಮತ್ತು ಅಲ್ಬೇನಿಯಾಗಳ ರಾಜಧಾನಿ ಯಾವುದು ?

(1) ಅರ್ಜೆಂಟೈನಾ – ಮನಾಮ,
ಅಲ್ಬೇನಿಯಾ – ಬಾಕು

(2) ಅರ್ಜೆಂಟೈನಾ – ಬ್ಯೂನಸ್ ಐರಿಸ್,
ಅಲ್ಬೇನಿಯಾ – ತಿರಾನಾ

(3) ಅರ್ಜೆಂಟೈನಾ – ಬೆಲ್ಮೊಪಾನ್,
ಅಲ್ಬೇನಿಯಾ – ಯೆರೆವಾನ್

(4) ಅರ್ಜೆಂಟೈನಾ – ಮಿನ್ಸ್ಕ್,
ಅಲ್ಬೇನಿಯಾ – ಬೆಲ್ಮೊಪಾನ್

www.shikarat.com

39. ಯುನೈಟೆಡ್ ಅರಬ್ಸ್ ಎಮಿರೇಟ್‌ನ ಕರೆನ್ಸಿ ಯಾವುದು ?

(1) ಯು.ಎ.ಇ. ದಿರ್ಹಾಮ್

(2) ಯು.ಎ.ಇ. ದೀನಾರ್

(3) ಯು.ಎ.ಇ. ಲೀರಾ

(4) ಯು.ಎ.ಇ. ರಿಯಾಲ್

40. ಸ್ವತಂತ್ರ ಭಾರತದ ಮೊದಲ ಕೇಂದ್ರ ಅಯವ್ಯಯವನ್ನು ಮಂಡಿಸಿದವರು ಯಾರು ?

(1) ಮೊರಾರ್ಜಿ ದೇಸಾಯಿ

(2) ಜಾನ್ ಮಥಾಯ್

(3) ಆರ್.ಕೆ. ಷಣ್ಮುಖಂ ಚೆಟ್ಟಿ

(4) ಎನ್.ಕೆ. ಚಂದಾ

41. ಭಾರತದಲ್ಲಿನ ಹಣದುಬ್ಬರಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿ ?

(1) ಭಾರತದಲ್ಲಿನ ಹಣದುಬ್ಬರವನ್ನು ನಿಯಂತ್ರಿಸುವುದು ಭಾರತ ಸರ್ಕಾರದ್ದಷ್ಟೇ ಹೊಣೆಗಾರಿಕೆಯಾಗಿದೆ.

(2) ಹಣದುಬ್ಬರವನ್ನು ನಿಯಂತ್ರಿಸುವುದರಲ್ಲಿ ರಿಸರ್ವ ಬ್ಯಾಂಕ್‌ನ ಪಾತ್ರವಿಲ್ಲ

(3) ಹಣ ಚಲಾವಣೆಯಲ್ಲಿನ ಕುಸಿತವು ಹಣದುಬ್ಬರದ ನಿಯಂತ್ರಣಕ್ಕೆ ಸಹಾಯಕವಾಗಿದೆ.

(4) ಹಣ ಚಲಾವಣೆಯಲ್ಲಿನ ಹೆಚ್ಚಳವು ಹಣದುಬ್ಬರದ ನಿಯಂತ್ರಣಕ್ಕೆ ಸಹಾಯಕವಾಗಿದೆ.

42. 2011 ರ ಜನಗಣತಿಯ ಮೇರೆಗೆ ಒಂದು ಚ.ಕಿ. ಮೀಗೆ 1102 ವ್ಯಕ್ತಿಗಳನ್ನು ಹೊಂದಿ ಅತ್ಯಂತ ಜನದಟ್ಟಣೆಯನ್ನು ಹೊಂದಿದೆ ಎಂದೆನಿಸಿದ ರಾಜ್ಯ ಯಾವುದು ?

(1) ಬಿಹಾರ್

(2) ಪಶ್ಚಿಮ ಬಂಗಾಳ

(3) ಕೇರಳ

(4) ಉತ್ತರ ಪ್ರದೇಶ

43. ಭಾರತದಲ್ಲಿ ತಲಾ ಕೃಷಿ ಹಿಡುವಳಿ ಭೂಮಿಯ ಹೊಂದಿರುವಿಕೆಯು ಕಡಿಮೆ ಇರುವುದಕ್ಕೆ ಕೆಳಗಿನವುಗಳಲ್ಲಿ ಯಾವುವು ಕಾರಣವಾಗಿವೆ ?

A. ಕೃಷಿಯ ವ್ಯಾಪಕತೆ

B. ಜನಸಂಖ್ಯೆಯಲ್ಲಿನ ತೀವ್ರಗತಿಯ ಹೆಚ್ಚಳ

C. ಉತ್ತರಾಧಿಕಾರಿಗಳಿಗೆ ಭೂಮಿಯನ್ನು ಸಮಾನವಾಗಿ ಭಾಗ ಮಾಡುವ ಪದ್ಧತಿ

D. ತಳೀಯ ಪರಿಷ್ಕೃತ (GM) ಬೆಳೆಗಳ ಬೆಳೆಯುವಿಕೆ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B

(2) B ಮತ್ತು C

(3) A ಮತ್ತು D

(4) A, B ಮತ್ತು D

www.shikarat.com

44. ಕೆಳಗಿನವುಗಳನ್ನು ಹೊಂದಿಸಿ :

| ಸೂಚಿ I | | ಸೂಚಿ II | |
|---|---|---|---|
| A. | ಆರ್ಥಿಕ ಕಡಿತ | I. | ನಿರ್ದಿಷ್ಟ ಕುಂದು ಕೊರತೆಯನ್ನು ಸರಿಪಡಿಸುವುದು |
| B. | ಟೋಕನ್ ಕಡಿತ | II. | ಲೋಕ ಸಭೆಯಲ್ಲಿ ಅನುಮೋದನೆ ಆದರೆ ಸಚಿವ ಮಂಡಳಿ ರಾಜೀನಾಮೆ ನೀಡುವುದು |
| C. | ದಂಡನಾ ನಿರ್ಣಯ | III. | ನೀತಿಯ ನಿರಾಕರಣೆ |
| D. | ನೀತಿ ಕಡಿತ | IV. | ನಿರ್ದಿಷ್ಟ ಮೊತ್ತದಷ್ಟು ಬೇಡಿಕೆಯನ್ನು ತಗ್ಗಿಸುವುದು |

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

| | A | B | C | D |
|---|---|---|---|---|
| (1) | II | IV | I | III |
| (2) | IV | III | II | I |
| (3) | IV | I | II | III |
| (4) | IV | III | I | II |

45. ಸಂವಿಧಾನಾತ್ಮಕ ಪರಿಹಾರ ಹಕ್ಕು ಕುರಿತಂತೆ ಈ ಹೇಳಿಕೆಗಳನ್ನು ಪರಿಗಣಿಸಿ

A. ರಿಟ್ ನೀಡಿಕೆಯು ಹಕ್ಕಿನ ವಿಷಯ.

B. ಶಾಸನದಿಂದ ಹಕ್ಕನ್ನು ಸಂಕ್ಷೇಪನ ಗೊಳಿಸಬಹುದು.

C. ಅಸಮಾಧಾನಕ್ಕೊಳಗಾದವರು ಮೊದಲು ಉಚ್ಚ ನ್ಯಾಯಾಲಯಕ್ಕೆ ಸಾಗಿ ಅನಂತರ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬೇಕು.

D. ಅನುಚ್ಛೇದ 32 ರ ಪ್ರಕಾರ ಪರ್ಯಾಯ ಪರಿಹಾರ ಲಭ್ಯತೆಗೆ ಅಡ್ಡಿಯಿಲ್ಲ.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು / ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು D ಮಾತ್ರ

(2) B ಮತ್ತು C ಮಾತ್ರ

(3) B ಮತ್ತು D ಮಾತ್ರ

(4) A ಮತ್ತು B ಮಾತ್ರ

46. ಕೇಂದ್ರ ಶಾಸನ ಸಭೆಯ ಎರಡು ಸದನಗಳು 1935 ರ ಭಾರತ ಸರ್ಕಾರದ ಕಾಯ್ದೆ ಪ್ರಕಾರ :

(1) ವಿಧಾನ ಸಭೆ ಮತ್ತು ವಿಧಾನ ಪರಿಷತ್ತು

(2) ಪ್ರಾಂತೀಯ ವಿಧಾನ ಸಭೆ ಮತ್ತು ಕೇಂದ್ರ ಶಾಸನ ಸಭೆ

(3) ಫೆಡರಲ್ ಅಸೆಂಬ್ಲಿ ಮತ್ತು ರಾಜ್ಯಗಳ ಮಂಡಲಿ

(4) ಮೇಲಿನ ಯಾವುವೂ ಅಲ್ಲ

www.shikarat.com

47. ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದ ರಾಷ್ಟ್ರೀಯ ಆಯೋಗ ಕುರಿತಂತೆ ಈ ಹೇಳಿಕೆಗಳನ್ನು ಪರಿಗಣಿಸಿ :

A. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಹಿತಾಸಕ್ತಿಗಳಿಗೆ ಮತ್ತು ಹಕ್ಕುಗಳಿಗೆ ಕುಂದು ಉಂಟಾದದ್ದರ ಬಗ್ಗೆ ನಿರ್ದಿಷ್ಟ ದೂರುಗಳನ್ನು ಪರಿಶೀಲಿಸುವುದು ಅದರ ಕರ್ತವ್ಯಗಳಲ್ಲೊಂದಾಗಿದೆ.

B. ಕೇಂದ್ರ ಸರ್ಕಾರ ಹಾಗು ಪ್ರತಿ ರಾಜ್ಯ ಸರ್ಕಾರಗಳೂ ಪ್ರಮುಖ ಪರಿಶಿಷ್ಟ ಜಾತಿಯವರ ಹಿತಾಸಕ್ತಿ ಮೇಲೆ ಪ್ರಭಾವ ಬೀರುವ ಪ್ರಮುಖ ನೀತಿ ನಿರೂಪಣೆಗೆ ಸಂಬಂಧಿಸಿದಂತೆ ಆಯೋಗ ದೊಂದಿಗೆ ಸಮಾಲೋಚಿಸುವುದು.

C. ಈ ಸುರಕ್ಷಾ ಕ್ರಮಗಳ ಬಗೆಗೆ ಆಯೋಗವು ಅಗತ್ಯವೆನಿಸಿದರೆ ವರದಿಯನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ವಾರ್ಷಿಕವಾಗಿ ಮತ್ತು ಬೇರೆ ಸಮಯಗಳಲ್ಲಿ ವರದಿ ಮಾಡುವುದು.

D. ಪರಿಶಿಷ್ಟ ಜಾತಿಯವರ ವಿರುದ್ಧ ನಡೆದ ದೌರ್ಜನ್ಯ ಕುರಿತಂತೆ ಕ್ರಿಮಿನಲ್ ನ್ಯಾಯಾಲಯ ಆಗಿ ಕಾರ್ಯ ನಿರ್ವಹಿಸುವುದು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು / ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) A, C ಮತ್ತು D ಮಾತ್ರ

(3) C ಮತ್ತು D ಮಾತ್ರ

(4) A ಮತ್ತು B ಮಾತ್ರ

48. ಕಾರು ಶೈತ್ಯಕವು

A. ನೀರಿನ ಕುದಿಯುವ ಬಿಂದುವನ್ನು ಹೆಚ್ಚು ಗೊಳಿಸುವುದು.

B. ನೀರಿನ ಘನೀಭವನ ಬಿಂದುವನ್ನು ತಗ್ಗಿಸುವುದು.

C. ಇಂಜಿನ್ನಿನ ಲೋಹೀಯ ಭಾಗಗಳ ತುಕ್ಕು ಹಿಡಿಯುವಿಕೆಯನ್ನು ಕಡಿಮೆ ಮಾಡುವುದು.

D. ಪೆಟ್ರೋಲ್‌ನ ಉಪಯೋಗವನ್ನು ತಗ್ಗಿಸುವುದು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು/ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B

(2) A, B ಮತ್ತು C

(3) A, B ಮತ್ತು D

(4) A, C ಮತ್ತು D

49. ವ್ಯಕ್ತಿಯ ತೂಕ ಶೂನ್ಯ ವಾಗುವುದು ಯಾವಾಗ ಎಂದರೆ

A. ಅವನು ಮುಕ್ತವಾಗಿ ಕೆಳಗೆ ಬೀಳುವಾಗ.

B. ಅವನು ಉಪಗ್ರಹದಲ್ಲಿ ಸುತ್ತುವಾಗ.

C. ಅವನು ಅತಿ ಎತ್ತರದಲ್ಲಿ ವಿಮಾನದಲ್ಲಿ ಹಾರಾಡುವಾಗ.

D. ಅವನು ಅನಿಲ ಭರಿತ ಬೆಲೂನಿನಲ್ಲಿ ಸವಾರಿ ಮಾಡುವಾಗ.

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಗಳು ಸರಿ

(2) A ಮತ್ತು D ಗಳು ಸರಿ

(3) A, B ಮತ್ತು D ಗಳು ಸರಿ

(4) A, B, C ಮತ್ತು D ಗಳು ಸರಿ



www.shikarat.com

50. ಭಾರತಕ್ಕೆ ಸ್ವಯಮಾಡಳಿತ ಸರಕಾರವನ್ನು ಆಧುನಿಕ ಷರತ್ತುಗಳಡಿಯಲ್ಲಿ ಪ್ರಾಚೀನ ಭಾರತ ಜೀವನವನ್ನು ಪೂರೈಸುವಂತಿರಬೇಕು ಮತ್ತು ಅಂತಿಮವಾಗಿ ವೇದಾಂತ ಆದರ್ಶಕ್ಕನುಗುಣವಾಗಿರಬೇಕೆಂದು ಪ್ರತಿಪಾದಿಸಿದ ರಾಷ್ಟ್ರೀಯತಾವಾದಿಗಳು ಯಾರು ?

(1) ರಾಜಾ ರಾಮ್‌ಮೋಹನ್ ರಾಯ್

(2) ಜಿ.ಕೆ. ಗೋಖಲೆ

(3) ಅರಬಿಂದೋ ಘೋಷ್

(4) ಶ್ರೀಮತಿ ಅನಿಬೆಸೆಂಟ್

51. "ಯಾವುದೇ ಆಕಾರ ಅಥವಾ ರೂಪದಲ್ಲಿ ಸಹಕಾರವನ್ನು ಸೈತಾನಿಕ ಸರಕಾರದೊಂದಿಗೆ ನೀಡುವುದು ಪಾಪ" – ಎಂದು ಗಾಂಧೀಜಿ ಘೋಷಿಸಿದ್ದು ಈ ಕೆಳಗಿನ ಯಾವ ಘಟನೆಯ ನಂತರ ?

(1) ರೌಲೆಟ್ ಕಾಯ್ದೆಯು ಜಾರಿಯಾದಾಗ

(2) ಪಂಜಾಬಿನಲ್ಲಿಯ ಜಲಿಯನ್‌ವಾಲಾ ಬಾಗ್ ದುರಂತ

(3) ಎರಡನೇ ದುಂಡು ಮೇಜು ಪರಿಷತ್ತಿನ ವೈಫಲ್ಯ

(4) ಮೇಲಿನ ಯಾವುವೂ ಅಲ್ಲ

52. ಈ ಹೇಳಿಕೆಗಳ ಸರಿಯಾದ ಕಾಲಾನುಕ್ರಮ ಆಯ್ಕೆ ಮಾಡಿ :

A. ಸಬರ್‌ಮತಿ ಆಶ್ರಮದಿಂದ ದಂಡಿ ಸಮುದ್ರ ತೀರಕ್ಕೆ ನಡಿಗೆ

B. ಲಾಹೋರ್ ಕಾಂಗ್ರೆಸ್ ಅಧಿವೇಶನ

C. ಗಾಂಧೀಜಿ ಎರಡನೆಯ ದುಂಡು ಮೇಜು ಪರಿಷತ್ತಿನಲ್ಲಿ ಭಾಗವಹಿಸಿದ್ದು

D. ಗಾಂಧಿ ಇರ್ವಿನ್ ಒಪ್ಪಂದ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತ ವನ್ನಾರಿಸಿ :

(1) B, C, D, A

(2) A, C, D, B

(3) B, A, D, C

(4) A, B, D, C

53. ಸಂಘವನ್ನು ರಚಿಸುವ ಹಕ್ಕಿನಲ್ಲಿ ಈ ಪೈಕಿ ಯಾವುದನ್ನು ನೀಡಲಾಗಿಲ್ಲ?

A. ಟ್ರೇಡ್ ಯೂನಿಯನ್ ರೂಪಿಸುವ ಹಕ್ಕು.

B. ಮುಷ್ಕರಕ್ಕೆ ಕರೆ ನೀಡುವ ಹಕ್ಕು.

C. ಸಂಘ ರಚಿಸುವಾಗ ಮಾನ್ಯತೆ ಪಡೆಯುವಾಗ ಸರ್ಕಾರದಿಂದ ವಿಧಿಸಲ್ಪಟ್ಟ ಷರತ್ತುಗಳನ್ನು ಎದುರಿಸುವುದು.

D. ಅಪೇಕ್ಷಿಸಿದಾಗ ಸಂಘದ ಸದಸ್ಯರಾಗುವ ಹಕ್ಕು.

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು D ಮಾತ್ರ

(2) B ಮಾತ್ರ

(3) C ಮಾತ್ರ

(4) B ಮತ್ತು C ಮಾತ್ರ

54. ಆದಿವಾಸಿ ಇಲ್ಲವೆ ಆದಿವಾಸಿ ಸಮುದಾಯ ಅಥವಾ ಭಾಗಶಃ ಅಥವಾ ಆದಿವಾಸಿಗಳೊಳಗೆ ಅಥವಾ ಆದಿವಾಸಿಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಅಧಿಸೂಚಿಸುವಾಗ ರಾಷ್ಟ್ರಪತಿಯವರು ಯಾರನ್ನು ಸಮಾಲೋಚಿಸಬೇಕು ?

(1) ಸಂಬಂಧಿಸಿದ ರಾಜ್ಯದ ಮುಖ್ಯ ಮಂತ್ರಿ

(2) ಭಾರತದ ಮುಖ್ಯ ನ್ಯಾಯಾಧೀಶರು

(3) ಸಂಬಂಧಿಸಿದ ರಾಜ್ಯದ ರಾಜ್ಯಪಾಲರು

(4) ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ಅಧ್ಯಕ್ಷರು

www.shikarat.com

55. ಈ ಕೆಳಗಿನ ಹೇಳಿಕೆಗಳನ್ನು ಭಾರತದ ರಾಜಕಾರಣಕ್ಕೆ ಸಂಬಂಧಿಸಿದಂತೆ – ಪರಿಗಣಿಸಿ :

A. ಸಂವಿಧಾನದ ಸಾರ್ವಭೌಮತೆ

B. ದ್ವಿನ್ಯಾಯಾಲಯದ ವ್ಯವಸ್ಥೆಯ ಗೈರುಹಾಜರು

C. ಅಖಿಲ ಭಾರತ ಸೇವೆಗಳ ಸೃಷ್ಟಿ

D. ಸಂವಿಧಾನದ 7ನೇ ಅನುಸೂಚಿ

ಈ ಪೈಕಿ ಯಾವುದು / ಯಾವುವು ಭಾರತದ ರಾಜಕೀಯತೆಯ ಏಕತೆ ಸ್ವರೂಪದವು ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮತ್ತು C ಮಾತ್ರ

(3) B, C ಮತ್ತು D ಮಾತ್ರ

(4) B ಮಾತ್ರ

56. ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಕುರಿತಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ ಈ ಪೈಕಿ ಯಾವ ಹೇಳಿಕೆಗಳು ಸರಿ ?

A. ತನ್ನ ಧರ್ಮದ ಪ್ರಸಾರವೆಂದರೆ, ಇತರ ಧರ್ಮದವರನ್ನು ತನ್ನ ಧರ್ಮಕ್ಕೆ ಮತಾಂತರಿಸುವುದು.

B. ಒಬ್ಬ ವ್ಯಕ್ತಿಯು ಇನ್ನೊಂದು ಧರ್ಮವನ್ನು ಅಳವಡಿಸಿಕೊಳ್ಳಲು ಸ್ವತಂತ್ರ.

C. ಧರ್ಮದ ಅತ್ಯಗತ್ಯ ಭಾಗವೆಂದು ಆ ಧರ್ಮ ಪರಿಗಣಿಸುವುದೋ ಅದನ್ನು ನ್ಯಾಯಾಂಗ ಪರಿಶೀಲನೆಗೆ ಒಳ ಪಡಿಸುವುದು.

D. ಆಡಳಿತವನ್ನು ಸಾಮಾಜಿಕ ಕ್ಷೇಮ ಅಥವಾ ಸುಧಾರಣೆ ಮಾಡುವಲ್ಲಿ ತಡೆಹಿಡಿಯದಿರುವುದು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು / ವು ಸರಿಯಲ್ಲ ?

(1) A ಮಾತ್ರ

(2) B ಮಾತ್ರ

(3) B ಮತ್ತು C ಮಾತ್ರ

(4) B, C ಮತ್ತು D ಮಾತ್ರ

57. ಈ ಪೈಕಿ ಯಾವ ಹೇಳಿಕೆ / ಗಳು ಶಾಸಕಾಂಗ ವಿಧಾನಗಳಿಗೆ ಸಂಬಂಧಿಸಿದಂತೆ ಸರಿ :

A. ಎರಡು ಸದನಗಳಲ್ಲಿ ಹಣಕಾಸು ಮಸೂದೆಗೆ ಸ್ಥಗಿತತೆ ಉಂಟಾದಾಗ ರಾಷ್ಟ್ರಪತಿಗಳು ಪಾರ್ಲಿಮೆಂಟಿನ ಜಂಟಿ ಸಭೆ ಕರೆಯಬಹುದು.

B. ಎರಡೂ ಸದನಗಳಲ್ಲಿ ಸಾಮಾನ್ಯ ಮಸೂದೆಗೆ ಸ್ಥಗಿತತೆ ಉಂಟಾದಾಗ ರಾಜ್ಯಪಾಲರು ಶಾಸಕಾಂಗದ ಜಂಟಿ ಸದನದ ಸಭೆಕರೆಯುವರು.

C. ಎರಡು ಸದನಗಳ ನಡುವೆ ಸಾಮಾನ್ಯ ಮಸೂದೆಗೆ ಸ್ಥಗಿತತೆ ಉಂಟಾದಾಗ ರಾಷ್ಟ್ರಪತಿಗಳು ಲೋಕಸಭೆಯ ಎರಡೂ ಸದನಗಳ ಜಂಟಿ ಸಭೆ ಕರೆಯುವರು.

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮತ್ತು C ಮಾತ್ರ

(3) B ಮಾತ್ರ

(4) C ಮಾತ್ರ

58. ರಾಜ್ಯ ನೀತಿ ನಿರ್ದೇಶನಾ ತತ್ವಗಳ ಯಾವ ಅನುಚ್ಛೇದವು ಹಸು ಮತ್ತು ಕರುಗಳ ಮತ್ತು ಇತರೆ ಕರಾವಿನ ಭಾರ ಎಳೆಯುವ ದನಕರುಗಳನ್ನು ಕಡಿಯುವುದನ್ನು ನಿಷೇಧಿಸುತ್ತದೆ.

(1) ಅನುಚ್ಛೇದ 48

(2) ಅನುಚ್ಛೇದ 47

(3) ಅನುಚ್ಛೇದ 43A

(4) ಅನುಚ್ಛೇದ 43



www.shikarat.com

59. ಪರಿವರ್ತಕವು ಇದಕ್ಕೆ ಬಳಕೆಯಾಗುವ ಸಾಧನ

(1) DC ವೋಲ್ಟೇಜು ಹೆಚ್ಚಳ (ಅಥವಾ ತಗ್ಗಿಕೆ)

(2) ವಿದ್ಯುತ್ ಉತ್ಪಾದನೆ

(3) AC ಯನ್ನು DC ಆಗಿ ಪರಿವರ್ತಿಸುವುದು

(4) AC ವೋಲ್ಟೇಜಿನ ಹೆಚ್ಚಳ ಇಲ್ಲವೆ ತಗ್ಗಿಕೆ

60. ದ್ಯುತಿತಂತುಗಳು ಇಲ್ಲಿ ಉಪಯುಕ್ತ

A. ಅತಿ ದೂರ ಸಂವಹನದಲ್ಲಿ.

B. ಜೆಟ್ ಇಂಜಿನ್ನುಗಳ ಆಂತರಿಕತಾಪವನ್ನು ಅಳೆಯುವ ಸಂವೇದಕಗಳು.

C. ಸೂರಿನಿಂದ ಕಟ್ಟಡದ ವಿವಿಧ ಭಾಗಗಳಿಗೆ ಸೂರ್ಯನ ಬೆಳಕು ಪಸರಿಸಲು.

D. ಎಂಡೋಸ್ಕೋಪಿಗಳಲ್ಲಿ.

ಮೇಲಿನವುಗಳಲ್ಲಿ ಯಾವುದು/ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A, B ಮತ್ತು C

(2) A, C ಮತ್ತು D

(3) A, B, C ಮತ್ತು D

(4) B, C ಮತ್ತು D

61. ಮೈಕ್ರೋಫೋನಿನಲ್ಲಿ ಆಗುವ ಶಕ್ತಿ ಪರಿವರ್ತನೆಯು ಉಂಟಾಗುವುದು

(1) ಶಬ್ದ ದಿಂದ ಯಾಂತ್ರಿಕ ದಿಂದ ವಿದ್ಯುತ್

(2) ವಿದ್ಯುತ್ ದಿಂದ ಯಾಂತ್ರಿಕ ದಿಂದ ಶಬ್ದ

(3) ಶಬ್ದ ದಿಂದ ಯಾಂತ್ರಿಕ

(4) ಯಾಂತ್ರಿಕದಿಂದ ಶಬ್ದ

62. ಕ್ರಿ.ಶ. 1942 ರಲ್ಲಿ ಭಾರತ ಬಿಟ್ಟುತೊಲಗಿ ಚಳುವಳಿ ಪ್ರಾರಂಭವಾದಾಗ ಭಾರತದ ವೈಸರಾಯ್ ಆಗಿದ್ದವರು ಯಾರು ?

(1) ಲಿನ್‌ಲಿತ್‌ಗೋ

(2) ವಿಲಿಂಗ್ಡನ್

(3) ವೇವೆಲ್

(4) ಮೇಲಿನ ಯಾವುದೂ ಅಲ್ಲ

63. ವಸಾಹತು ಅವಧಿಯಲ್ಲಿನ ಕೆಲವು ಸಾಮಾಜಿಕ ಸುಧಾರಕರು ಮತ್ತು ಅವರ ಸಂಸ್ಥೆಗಳನ್ನು ಇಲ್ಲಿ ನೀಡಲಾಗಿದೆ :

A. ಸೇವಾಸದನ : ಮಹರ್ಷಿ ಕರ್ವೆ

B. ಸೋಷಿಯಲ್ ಸರ್ವೀಸ್ ಲೀಗ್ : ಚಂದಾವರ್‌ಬಾಯಿ

C. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ : ಜಿ.ಕೆ. ಗೋಖಲೆ

D. ಶಾರದಾ ಸದನ್ : ಪಂಡಿತಾ ರಾಮಾಬಾಯಿ

ಮೇಲಿನ ಜೋಡಿಗಳಲ್ಲಿ ಯಾವುದು/ವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) C ಮತ್ತು D ಮಾತ್ರ

(4) A, B, C ಮತ್ತು D

64. ಬರಿಕಣ್ಣಿಗೆ ಕಾಣುವ ಸಮೀಪದ ನಕ್ಷತ್ರ (ಸೂರ್ಯನಲ್ಲದ್ದು)

(1) ಪ್ರಾಕ್ಸಿಮಾ ಸೆಂಟಾರಿ

(2) ಆಲ್ಫ ಸೆಂಟಾರಿ

(3) ಧ್ರುವ ನಕ್ಷತ್ರ

(4) ವೇಗ

65. 60 ಜನ ವಿದ್ಯಾರ್ಥಿಗಳು ಇರುವ ತರಗತಿಯಲ್ಲಿ 1 ರಿಂದ 60 ರವರೆಗೆ ಶ್ರೇಣೀಕರಿಸಲಾಗಿದೆ. ವಿದ್ಯಾರ್ಥಿನಿಯರು ವಿದ್ಯಾರ್ಥಿಗಳಿಗಿಂತ ಎರಡು ಪಟ್ಟು ಸಂಖ್ಯೆ ಇದ್ದಾರೆ. ಬಾಲಕರಲ್ಲಿ ಕಾರ್ತಿಕ್ ಮೇಲಿನಿಂದ 18 ನೇ ರ್‍ಯಾಂಕ್ ಗಳಿಸಿದ. ಕಾರ್ತಿಕನಿಗಿಂತ ಹನ್ನೆರಡು ಹುಡುಗಿಯರು ಮುಂದೆ ಇದ್ದರೆ ಎಷ್ಟು ವಿದ್ಯಾರ್ಥಿಗಳು (ಬಾಲಕ) ಅವನ ನಂತರ ಇದ್ದಾರೆ ?

(1) 2

(2) 14

(3) 16

(4) 18

www.shikarat.com

66. ಈ ಪೆಟ್ಟಿಗೆಯಲ್ಲಿ ತಪ್ಪಿಹೋಗಿರುವ ಸಂಖ್ಯೆ

| | | |
|---|---|---|
| 5 | 9 | 7 |
| 4 | 5 | 3 |
| 1 | 6 | 8 |
| 108 | | 326 |

(1) 628

(2) 638

(3) 668

(4) 698

67. ಹೆಂಡತಿಯ ವಯಸ್ಸಿನ ಸಂಖ್ಯೆಗಳನ್ನು ಅದಲು ಬದಲು ಮಾಡಿದರೆ ಗಂಡನ ವಯಸ್ಸು ಬರುತ್ತದೆ. ಅವರ ವಯಸ್ಸಿನ ಅಂತರ ಅವರ ವಯಸ್ಸಿನ ಮೊತ್ತದ ಹನ್ನೊಂದರಲ್ಲಿ ಒಂದು ಭಾಗವಾದರೆ ಆಗ ಪತ್ನಿಯ ವಯಸ್ಸು

(1) 56

(2) 45

(3) 34

(4) 23

68. B ನಗರವು A ನಗರದ ದಕ್ಷಿಣಕ್ಕೆ 4 ಮೈಲಿ ದೂರ. C ಯು B ಯ ಪಶ್ಚಿಮಕ್ಕೆ 6 ಮೈಲಿ ದೂರ ಮತ್ತು D ನಗರವು C ಯ ದಕ್ಷಿಣಕ್ಕೆ 4 ಮೈಲಿ ದೂರ. A ಮತ್ತು D ಗಳ ನಡುವೆ ಇರುವ ಅತಿ ಕಡಿಮೆ ದೂರ


(1) 8 ಮೈಲಿ

(2) 12 ಮೈಲಿ

(3) 14 ಮೈಲಿ


(4) 10 ಮೈಲಿ


69. ಈ ಚಿತ್ರಗಳನ್ನು ಗಮನಿಸಿ :





1 2 3 4

ಈ ಪೈಕಿ ಯಾವುದು ನಾಲ್ಕನೇ ಸ್ಥಾನಕ್ಕೆ ಹೊಂದುವುದು ?

(1) 

(2) 

(3) 

(4) 

70. 3 ಪುರುಷರು ಮತ್ತು 7 ಮಹಿಳೆಯರು 10 ದಿನಗಳಲ್ಲಿ ಒಂದು ಕೆಲಸವನ್ನು ಮುಗಿಸುವರು. ಆದರೆ 4 ಪುರುಷರು ಮತ್ತು 6 ಮಹಿಳೆಯರು 8 ದಿನಗಳಲ್ಲಿ ಅದೇಕೆಲಸವನ್ನು ಮುಗಿಸುವರು. ಹಾಗಾದರೆ 10 ಮಹಿಳೆಯರು ಅದೇ ಕೆಲಸವನ್ನು ಎಷ್ಟು ದಿನದಲ್ಲಿ ಮುಗಿಸುವರು ?

(1) 30

(2) 20

(3) 50

(4) 40

www.shikarat.com

71. ಈ ಹೇಳಿಕೆಯನ್ನು ಓದಿ :

"ಎಲ್ಲ ಮೊಬೈಲುಗಳು ಆ ಅಂಗಡಿಯಲ್ಲಿ ಮಾರಾಟವಾದವು ಉತ್ತಮ ಗುಣಮಟ್ಟದವು. ಕೆಲವು ಸ್ಯಾಮ್‌ಸಂಗ್ ಮೊಬೈಲುಗಳು ಆ ಅಂಗಡಿಯಲ್ಲಿ ಮಾರಾಟವಾಗಿವೆ."

ಈ ಪೈಕಿ ಯಾವ ತೀರ್ಮಾನವು ಸರಿ ?

(1) ಸ್ಯಾಮ್‌ಸಂಗ್ ನವರು ಉತ್ಪಾದಿಸಿದ ಎಲ್ಲ ಮೊಬೈಲುಗಳೂ ಉತ್ತಮಗುಣ ಮಟ್ಟದವು.

(2) ಸ್ಯಾಮ್‌ಸಂಗ್ ಮೊಬೈಲುಗಳ ಪೈಕಿ ಕೆಲವು ಉತ್ತಮ ಗುಣಮಟ್ಟದವು.

(3) ಯಾವುದೇ ಸ್ಯಾಮ್‌ಸಂಗ್ ಮೊಬೈಲು ಉತ್ತಮ ಗುಣಮಟ್ಟದ್ದಲ್ಲ.

(4) ಉತ್ತಮಗುಣಮಟ್ಟದ ಕೆಲವು ಸ್ಯಾಮ್‌ಸಂಗ್ ಮೊಬೈಲುಗಳು ಆ ಅಂಗಡಿಯಲ್ಲಿ ಮಾರಾಟವಾಗಲಿಲ್ಲ.

72. ಈ ಸಂಖ್ಯೆಯ ಗಣಗಳ ಪೈಕಿ ಯಾವುದು {64, 16, 8} ಗಣದಂತಲ್ಲ?

(1) {96, 24, 12}


(2) {128, 32, 16}

(3) {144, 36, 18}


(4) {72, 18, 6}


73. ಈ ಪೈಕಿ ನಾಲ್ಕು ತಾರ್ಕಿಕ ವೆನ್ ನಕಾಶೆಗಳು ಈ ಸಂಬಂಧವನ್ನು ಪ್ರತಿನಿಧಿಸುವವು ?

ಸಂಗೀತಗಾರರು, ಪಿಟೀಲು ವಾದಕರು, ಗಾಯಕರು

(1) 

(2) 

(3) 

(4) 

74. ಈ ಸರಣಿಯ ಮುಂದಿನ ಅಂಕೆ :

1, 2, 4, 5, 9, 10, 16, 17, 25, ___

(1) 36

(2) 26

(3) 25

(4) 24

75. ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಿಸುವ ಸಂದರ್ಭದಲ್ಲಿ ರಾಷ್ಟ್ರಪತಿಯವರು

A. ರಾಜ್ಯದ ಎಲ್ಲ ಕಾರ್ಯನಿರ್ವಹಣೆಯನ್ನೂ ಉಚ್ಚ ನ್ಯಾಯಾಲಯವೂ ಸೇರಿದಂತೆ ತಾವೇ ವಹಿಸಿಕೊಳ್ಳುವರು.

B. ರಾಜ್ಯಪಾಲರ ಅಧಿಕಾರದ ಅಡಿಯಲ್ಲಿ ರಾಜ್ಯ ಆಡಳಿತದಲ್ಲಿನ ಅಧಿಕಾರವನ್ನು ಶಾಸನಸಭೆ ನಿರ್ವಹಿಸುವುದೆಂದು ಘೋಷಿಸುವರು.

C. ಉಚ್ಚ ನ್ಯಾಯಾಲಯದ ಹೊರತಾಗಿ ರಾಜ್ಯದ ಎಲ್ಲ ಕಾರ್ಯಗಳ ನಿರ್ವಹಣೆಯನ್ನು ತಾವೇ ವಹಿಸಿಕೊಳ್ಳುವರು .

D. ರಾಷ್ಟ್ರಪತಿಗಳ ಅಧಿಕಾರದ ಅಡಿಯಲ್ಲಿ ರಾಜ್ಯ ಶಾಸನ ಸಭೆಯು ಅಧಿಕಾರ ಚಲಾಯಿಸುವುದು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) C ಮತ್ತು D ಮಾತ್ರ

(4) A ಮತ್ತು D ಮಾತ್ರ

www.shikarat.com

76. ಈ ಪೈಕಿ ಯಾವ ರಾಜ್ಯದಲ್ಲಿ ದ್ವಿಶಾಸನ ಸಭೆ ಇಲ್ಲ (ವಿಧಾನ ಸಭೆ + ವಿಧಾನಪರಿಷತ್ತು)

A. ಉತ್ತರ ಪ್ರದೇಶ

B. ಮಧ್ಯ ಪ್ರದೇಶ

C. ಬಿಹಾರ

D. ಕರ್ನಾಟಕ

ಸರಿಯಾದ ಸಂಕೇತಗಳನ್ನಾರಿಸುವ ಮೂಲಕ ಸರಿಯಾದ ಉತ್ತರಗಳನ್ನು ಆರಿಸಿ :

(1) A ಮಾತ್ರ

(2) B ಮಾತ್ರ

(3) B ಮತ್ತು D

(4) A ಮತ್ತು C

77. ನಬಾರ್ಡ್‌ನ ಮೂರು ಪ್ರಧಾನ ಕಾರ್ಯಗಳೆಂದರೆ

(1) ಮರುಹಣನೀಡಿಕೆ, ಸಾಂಸ್ಥಿಕ ಬೆಳವಣಿಗೆ ಮತ್ತು ಕಕ್ಷಿದಾರ ಬ್ಯಾಂಕುಗಳ ಪರಿಶೀಲನೆ

(2) ಮರುಹಣನೀಡಿಕೆ, ಗ್ರಾಮ ದತ್ತು ಮತ್ತು ಕಿರು ರೈತರಿಗೆ ಮಧ್ಯಮ ಅವಧಿಯ ಸಾಲದ ವಿಸ್ತರಣೆ

(3) ಮರುಹಣನೀಡಿಕೆ, ರಾಜ್ಯಮಟ್ಟದ ಸಹಕಾರಿ ಬ್ಯಾಂಕುಗಳಿಗೆ ಮತ್ತು ಹಿರಿಯ ರೈತರಿಗೆ ಅವಧಿಕ ಸಾಲ ವಿಸ್ತರಣೆ

(4) ಈ ಮೇಲಿನ ಯಾವುವೂ ಅಲ್ಲ

78. ಕೆಳಗಿನ ಯಾವ ಮೊಘಲ್ ದೊರೆಗಳು ಇಸ್ಲಾಂ ಕಾನೂನುಗಳನ್ನು "ಫತ್ವಾ-ಇ-ಅಲಂಗೀರ್" ಎಂಬ ಪುಸ್ತಕದಲ್ಲಿ ಸಂಯೋಜಿಸಿ ಪರಿಚಯಿಸಿದರು ?

(1) ಔರಂಗ್‌ಜೇಬ್

(2) ಅಕ್ಬರ್

(3) ಜಹಾಂಗೀರ್

(4) ಷಹಜಹಾನ್

79. ದಾರಾ ಶಿಕೋರು ಪರ್ಷಿಯನ್‌ಗೆ ಉಪನಿಷತ್ತುಗಳನ್ನು ಭಾಷಾಂತರ ಮಾಡಿದ್ದು ಈ ಶೀರ್ಷಿಕೆಯಡಿಯಲ್ಲಿ :

(1) ಆಲ್-ಫಿಟ್ರಿಸ್ಟ್

(2) ಕಿತಾಬ್-ಉಲ್-ಬಯಾನ್

(3) ಮಜ್ಮಾ-ಉಲ್-ಬಹರೇನ್

(4) ಶಿರ್-ಇ-ಅಕಬರ್

80. ನಾಟ್ಯಶಾಸ್ತ್ರ ಅಭಿನಯ ಕಲೆಯ ಮೇಲಿರುವ ಸಂಸ್ಕೃತ ಹಿಂದೂ ಕೃತಿ, ಅಭಿನಯ ಕಲೆ ಮತ್ತು ಈ ವಿಷಯಗಳನ್ನು ನಾಟಕ ರಚನೆ, ಅಭಿನಯ ಕೌಶಲ, ಅಂಗಭಂಗಿ, ದೇಹ ಚಲನೆಗಳು, ಪ್ರಸಾಧನ, ಉಡುಗೆ ಕುರಿತು ಇದೆ. ಇದರ ಕರ್ತೃ

(1) ಭರತ ಮುನಿ

(2) ತಂಡು ಮುನಿ

(3) ನಾರದ ಮುನಿ

(4) ಅಭಿನವ ಗುಪ್ತ

81. ಪಟ್ಟಿ I ಮತ್ತು ಪಟ್ಟಿ II ಪಟ್ಟಿ ಹೊಂದಿಸಿ :

| ಪಟ್ಟಿ *I* | | ಪಟ್ಟಿ *II* | |
|---|---|---|---|
| A. | ರಾಮಾನುಜ | I. | ಶುದ್ಧಾದ್ವೈತ |
| B. | ಮಧ್ವಾಚಾರ್ಯ | II. | ದ್ವೈತಾದ್ವೈತ |
| C. | ನಿಂಬರಕಾಚಾರ್ಯ | III. | ದ್ವೈತ |
| D. | ವಲ್ಲಭಾಚಾರ್ಯ | IV. | ವಿಶಿಷ್ಟಾದ್ವೈತ |

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

| | A | B | C | D |
|---|---|---|---|---|
| (1) | IV | III | II | I |
| (2) | I | II | III | IV |
| (3) | III | I | IV | II |
| (4) | II | IV | I | III |

www.shikarat.com

82. ಲೇಖಕರು (ಪಟ್ಟಿ I) ಮತ್ತು ಅವರಿಂದ ಬರೆಯಲ್ಪಟ್ಟ ಕೃತಿಗಳ (ಪಟ್ಟಿ II) ಪಟ್ಟಿಯನ್ನು ಹೊಂದಿಸಿರಿ :

| *ಪಟ್ಟಿ I* (ಲೇಖಕರು) | | *ಪಟ್ಟಿ II* (ಕೃತಿಗಳು) | |
|---|---|---|---|
| A. | ವಿಕ್ರಮ ಸೇತ್ | I. | ದ ವೈಟ್ ಟೈಗರ್ |
| B. | ಉಪಮನ್ಯು ಚಟರ್ಜಿ | II. | ಎ ಸೂಟಬಲ್ ಬಾಯ್ |
| C. | ಕಿರಣ ದೇಸಾಯಿ | III. | ಇಂಗ್ಲೀಷ್ ಆಗಸ್ಟ್ : ಎನ್ ಇಂಡಿಯನ್ ಸ್ಟೋರಿ |
| D. | ಝುಂಪಾ ಲಹೆರಿ | IV. | ಎನ್‌ಹೆರಿಟೆನ್ಸ್ ಆಫ್ ಲಾಸ್ |
| | | V. | ಇಂಟರ್‌ಪ್ರಿಟರ್ ಆಫ್ ಮೆಲಡೀಸ್ |

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

| | A | B | C | D |
|---|---|---|---|---|
| (1) | I | IV | II | III |
| (2) | II | III | IV | V |
| (3) | III | II | V | I |
| (4) | I | III | IV | V |

83. ಇವನ್ನು ಪರಿಗಣಿಸಿ :

A. ಕಾರ್ಬನ್ ಡೈಆಕ್ಸೈಡು

B. ನೈಟ್ರೋಜನ್ ಆಕ್ಸೈಡುಗಳು

C. ಸಲ್ಫರ್ ಆಕ್ಸೈಡುಗಳು

ಥರ್ಮಲ್ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲ ದಹನದಿಂದ ಮೇಲಿನವುಗಳಲ್ಲಿ ಯಾವುದು/ವು ವಿಸರ್ಜಿಸಲ್ಪಡುತ್ತದೆ/ವೆ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮತ್ತು C

(3) A ಮತ್ತು C

(4) A, B ಮತ್ತು C

84. ಕ್ರೀಡಾಳುಗಳೊಂದಿಗೆ (ಪಟ್ಟಿ I) ಅವರಿಗೆ ಸಂಬಂಧಿಸಿದ ಕ್ರೀಡೆಗಳನ್ನು (ಪಟ್ಟಿ II) ಹೊಂದಿಸಿರಿ :

| *ಪಟ್ಟಿ I* (ಕ್ರೀಡಾಳುಗಳು) | | *ಪಟ್ಟಿ II* (ಕ್ರೀಡೆಗಳು) | |
|---|---|---|---|
| A. | ಶ್ರೇಯಸ್ ಮೆಹ್ತಾ | I. | ಕ್ರಿಕೆಟ್ |
| B. | ಜೂಡಿ ಫೆಲಿಕ್ಸ್ | II. | ಸ್ಕ್ವಾಷ್ |
| C. | ಸ್ಮೃತಿ ಮಂಧಾನಾ | III. | ಹಾಕಿ |
| D. | ಪಂಕಜ್ ಅಡ್ವಾನಿ | IV. | ಬಿಲಿಯರ್ಡ್ಸ್ |

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

| | A | B | C | D |
|---|---|---|---|---|
| (1) | I | IV | II | III |
| (2) | II | III | I | IV |
| (3) | III | II | IV | I |
| (4) | IV | I | III | II |

85. ಯುನೈಟೆಡ್ ನೇಷನ್ಸ್‌ಗಳ ಅಧಿಕೃತ ಭಾಷೆಗಳೆಂದರೆ :

(1) ಆಫ್ರಿಕನ್, ಚೈನೀಸ್, ಇಂಗ್ಲೀಷ್, ಫ್ರೆಂಚ್, ಜರ್ಮನ್ ಮತ್ತು ಸ್ಪಾನಿಷ್

(2) ಅರೇಬಿಕ್, ಚೈನೀಸ್, ಇಂಗ್ಲೀಷ್, ಫ್ರೆಂಚ್, ರಷ್ಯನ್ ಮತ್ತು ಸ್ಪಾನಿಷ್

(3) ಅರೇಬಿಕ್, ಜಪಾನೀಸ್, ಚೈನೀಸ್, ಇಂಗ್ಲೀಷ್, ಫ್ರೆಂಚ್, ಜರ್ಮನ್ ಮತ್ತು ಸ್ಪಾನಿಷ್

(4) ಚೈನೀಸ್, ಇಂಗ್ಲೀಷ್, ಫ್ರೆಂಚ್, ಹಿಂದಿ, ಜಪಾನೀಸ್ ಮತ್ತು ಸ್ಪಾನಿಷ್

86. ಜೈಪುರ್ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ 2017 ರಲ್ಲಿ ಜೀವಮಾನ ಸಾಧನೆಯ ಪ್ರಶಸ್ತಿಯ ಗೌರವಕ್ಕೆ ಭಾಜನರಾದವರು ಯಾರು ?

(1) ಓಂ ಪುರಿ

(2) ಅಮಿತಾಭ್ ಬಚ್ಚನ್

(3) ರಮೇಶ್ ಪ್ರಸಾದ್

(4) ಮೇಲಿನ ಯಾರು ಅಲ್ಲ

www.shikarat.com

87. 1969 ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಆ ಅವಧಿಯಲ್ಲಿ ಭಾರತದ ಪ್ರಧಾನ ಮಂತ್ರಿ ಯಾರಾಗಿದ್ದರು ?

(1) ಇಂದಿರಾ ಗಾಂಧಿ

(2) ಜವಾಹರಲಾಲ್ ನೆಹರೂ

(3) ಲಾಲ್ ಬಹದೂರ್ ಶಾಸ್ತ್ರಿ

(4) ಮೊರಾರ್ಜಿ ದೇಸಾಯಿ

88. ಇಲ್ಲಿಯತನಕ ವಿಶ್ವ ಆರೋಗ್ಯ ಸಂಸ್ಥೆ (WHO) ಯಲ್ಲಿ ಅಧ್ಯಕ್ಷರಾಗಿದ್ದವರಲ್ಲಿ ಏಕೈಕ ಭಾರತೀಯ ಮಹಿಳೆ ಎಂದರೆ

(1) ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ

(2) ರಾಜ್ ಕುಮಾರಿ ಅಮೃತ್ ಕೌರ್

(3) ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್

(4) ಡಾ. ಸುಶೀಲಾ ನಾಯರ್

89. ಕೆಳಗಿನ ಕರ್ನಾಟಕದ ಕೈಗಾರಿಕೆಗಳೊಂದಿಗೆ (ಪಟ್ಟಿ I) ಅದು ಸ್ಥಾಪನೆಯಾಗಿರುವ ಪ್ರದೇಶವನ್ನು (ಪಟ್ಟಿ II) ಹೊಂದಿಸಿರಿ :

| *ಪಟ್ಟಿ I* (*ಕೈಗಾರಿಕೆ*) | *ಪಟ್ಟಿ II* (*ಪ್ರದೇಶ*) |
|---|---|
| A. ಸಿಮೆಂಟ್ ಕೈಗಾರಿಕೆ | I. ಉಗಾರ್ |
| B. ಸಕ್ಕರೆ ಕೈಗಾರಿಕೆ | II. ತೋರಣಗಲ್ಲು |
| C. ಕಾಗದ ಕೈಗಾರಿಕೆ | III. ಶಹಾಬಾದ್ |
| D. ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ | IV. ದಾಂಡೇಲಿ |

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

| | A | B | C | D |
|---|---|---|---|---|
| (1) | III | I | IV | II |
| (2) | IV | I | III | II |
| (3) | III | IV | I | II |
| (4) | II | III | IV | I |

90. ವಾಣಿ ವಿಲಾಸ ಸಾಗರ ವಿವಿಧೋದ್ದೇಶ ಯೋಜನೆಯನ್ನು ನಿರ್ಮಾಣ ಮಾಡಿರುವುದು ಈ ನದಿಯ ಮೇಲೆ.

(1) ಭದ್ರಾ

(2) ವೇದಾವತಿ

(3) ಮಲಪ್ರಭಾ

(4) ಹೇಮಾವತಿ

91. ಕರ್ನಾಟಕದ ಅತಿ ಉದ್ದನೆಯ ರಾಷ್ಟ್ರೀಯ ಹೆದ್ದಾರಿ, ಎನ್.ಹೆಚ್.-13 ಇವುಗಳ ನಡುವೆ ಸಂಪರ್ಕವನ್ನು ಕಲ್ಪಿಸುತ್ತದೆ

(1) ಬೀದರ್ – ಬಾಗಲ್‌ಕೋಟೆ

(2) ಕಲಬುರ್ಗಿ – ಮೈಸೂರು

(3) ಪುಣೆ – ಬೆಂಗಳೂರು

(4) ಮೇಲಿನ ಯಾವುವೂ ಅಲ್ಲ

92. ವನ್ಯಜೀವಿ ಆಶ್ರಯ ಧಾಮಗಳೊಂದಿಗೆ (ಪಟ್ಟಿ I) ಅವುಗಳಿರುವ ಸ್ಥಳಗಳನ್ನು (ಪಟ್ಟಿ II) ಹೊಂದಿಸಿರಿ :

| *ಪಟ್ಟಿ I* (*ವನ್ಯಜೀವಿ ಆಶ್ರಯಧಾಮ*) | *ಪಟ್ಟಿ II* (*ಸ್ಥಳಗಳು*) |
|---|---|
| A. ತಲಕಾವೇರಿ ವನ್ಯ ಜೀವಿ ಆಶ್ರಯಧಾಮ | I. ಶಿವಮೊಗ್ಗ |
| B. ಶರಾವತಿ ವನ್ಯ ಜೀವಿ ಆಶ್ರಯಧಾಮ | II. ಮಂಡ್ಯ |
| C. ರಂಗನತಿಟ್ಟು ವನ್ಯ ಜೀವಿ ಆಶ್ರಯಧಾಮ | III. ಉತ್ತರ ಕನ್ನಡ |
| D. ದಾಂಡೇಲಿ ವನ್ಯ ಜೀವಿ ಆಶ್ರಯಧಾಮ | IV. ಕೊಡಗು |

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

| | A | B | C | D |
|---|---|---|---|---|
| (1) | IV | III | I | II |
| (2) | II | I | IV | III |
| (3) | I | III | II | IV |
| (4) | IV | I | II | III |

www.shikarat.com

**93.** ನಗರಗಳೊಂದಿಗೆ (ಪಟ್ಟಿ I) ಸಮುದ್ರ ಬಂದರುಗಳು ಹೊಂದಿರುವ ಸ್ವಭಾವಗಳನ್ನು (ಪಟ್ಟಿ II) ಹೊಂದಿಸಿರಿ :

| ಪಟ್ಟಿ I (ನಗರಗಳು) | | ಪಟ್ಟಿ II (ಸಮುದ್ರ ಬಂದರುಗಳು) |
|---|---|---|
| A. ಮುಂಬಯಿ | I. | ಉಬ್ಬರವಿಳಿತ ಬಂದರು |
| B. ಕೋಲ್ಕತ್ತಾ | II. | ಸ್ವಾಭಾವಿಕ ಬಂದರು |
| C. ವಿಶಾಖಪಟ್ಟಣಂ | III. | ನದೀಯ ಬಂದರು |
| D. ಕಾಂಡ್ಲಾ | IV. | ಆಳವಾದ ಬಂದರು |

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

| | A | B | C | D |
|---|---|---|---|---|
| (1) | II | III | IV | I |
| (2) | II | IV | I | III |
| (3) | III | II | IV | I |
| (4) | I | III | II | IV |

**94.** 1972 ರಲ್ಲಿ ಈ ದಿನಾಂಕದಂದು ಮಾನವ ಪರಿಸರದ ಕುರಿತಾದ ಸ್ಟಾಕ್ ಹೋಮ್ ಅಧಿವೇಶನವು ಸ್ವೀಡನ್‌ನಲ್ಲಿ ನಡೆಯಿತು, ಅಂದಿನಿಂದ ವಿಶ್ವ ಪರಿಸರ ದಿನವನ್ನು ಆ ದಿನಾಂಕದಂದು ಆಚರಿಸಲಾಗುತ್ತದೆ. ಆ ದಿನಾಂಕವನ್ನು ತಿಳಿಸಿ :

(1) 8 ನೇ ಮಾರ್ಚ್

(2) 5 ನೇ ಜೂನ್

(3) 22 ನೇ ಮೇ

(4) 8 ನೇ ಅಕ್ಟೋಬರ್

**95.** ಈ ಕೆಳಗಿನ ಜೋಡಿಗಳನ್ನು ಪರಿಗಣಿಸಿ :

| ಗದ್ದೆಗಳು | | ನದಿ ಸಂಗಮ |
|---|---|---|
| A. ಹರಿಕೆ ಗದ್ದೆಗಳು | – | ಬಿಯಾಸ್ ಮತ್ತು ಸಟ್ಲೇಜ್ ಸಂಗಮ |
| B. ಕಿಯೊಲೆಡೊ ಘಾನಾ ರಾಷ್ಟ್ರೀಯ ಉದ್ಯಾನ | – | ಬಾನಸ್ ಮತ್ತು ಚಂಬಲ್ ಸಂಗಮ |
| C. ಕೊಲ್ಲೇರು ಸರೋವರ | – | ಮೂಸಿ ಮತ್ತು ಕೃಷ್ಣಾ ಸಂಗಮ |

ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿ ?

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) A ಮಾತ್ರ

(2) B ಮತ್ತು C ಮಾತ್ರ

(3) A ಮತ್ತು C ಮಾತ್ರ

(4) A, B ಮತ್ತು C

**96.** ಪುನರುಜ್ಜೀವನ ಬರಹಗಾರರು (ಪಟ್ಟಿ I) ಮತ್ತು ಅವರ ಕೃತಿಗಳು (ಪಟ್ಟಿ II) ಹೊಂದಿಸಿರಿ :

| ಪಟ್ಟಿ I (ಬರಹಗಾರರು) | | ಪಟ್ಟಿ II (ಕೃತಿಗಳು) |
|---|---|---|
| A. ಡಾಂಟೆ | I. | ಗರ್ಗಂಟುವ ಮತ್ತು ಪಂಟಾಗ್ರುಯೆಲ್ |
| B. ಮೆಕೈವಲ್ಲಿ | II. | ಡಾನ್ ಕ್ವಿಕ್ಸೋಟ್ |
| C. ರಬೆಲಾಯ್ಸ್ | III. | ದ ಪ್ರಿನ್ಸ್ |
| D. ಸರ್ವೆಂಟಾಸ್ | IV. | ಡಿವೈನ್ ಕಾಮೆಡಿ |

ಕೆಳಗೆ ನೀಡಿರುವ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | II | III | I | IV |
| (2) | III | IV | II | I |
| (3) | IV | III | II | I |
| (4) | IV | III | I | II |

www.shikarat.com

**97.** ಪ್ರತ್ಯಾಮ್ಲಕವನ್ನು ಹೊಟ್ಟೆಯ ಆಮ್ಲೀಯತೆ ನಿವಾರಣೆಗೆ ಬಳಕೆ ಮಾಡಲಾಗುವುದು. ಸಾಮಾನ್ಯವಾಗಿ ಬಳಸುವ ಪ್ರತ್ಯಾಮ್ಲಕ

(1) ಸೋಡಿಯಮ್ ಹೈಡ್ರೋಜನ್ ಥ್ಯಾಲೇಟ್

(2) ಮೆಗ್ನೀಸಿಯುಮ್ ಹೈಡ್ರಾಕ್ಸೈಡು

(3) ಕ್ಯಾಲ್ಸಿಯಮ್ ಹೈಡ್ರಾಕ್ಸೈಡು

(4) ಮ್ಯಾಂಗನೀಸ್ ಅಸಿಟೇಟು

**98.** ಈ ಕೆಳಗಿನವುಗಳನ್ನು ಹೊಂದಿಸಿ : ಪರಿಸರ ವಿಘಟನೆ ಬಗೆಗಳನ್ನು (ಪಟ್ಟಿ I) ಮತ್ತು ವಿಘಟನಾ ಕಾರಕಗಳನ್ನು (ಪಟ್ಟಿ II) ನೀಡಿದೆ :

| | *ಪಟ್ಟಿ I* (ಪರಿಸರಾತ್ಮಕ ವಿಘಟನೆ) | | *ಪಟ್ಟಿ II* (ವಿಘಟನಾಕಾರಕ) |
|---|---|---|---|
| A. | ಆಮ್ಲ ಮಳೆ | I. | ಫಾಸ್ಫೋರಸ್ |
| B. | ಓಜೋನ್ ವಿನಾಶ | II. | ಕಾರ್ಬನ್ ಡೈಆಕ್ಸೈಡು |
| C. | ಜಾಗತಿಕ ತಾಪ | III. | ನೈಟ್ರೋಜನ್ ಆಕ್ಸೈಡ ಮತ್ತು ಸಲ್ಫರ್ ಡೈಆಕ್ಸೈಡ |
| | | IV. | ಕ್ಲೋರೋಫ್ಲೂರೋ–ಕಾರ್ಬನ್ |

ಕೆಳಗೆ ನೀಡಿರುವ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರಗಳನ್ನು ಆರಿಸಿ :

| | A | B | C |
|---|---|---|---|
| (1) | IV | II | I |
| (2) | III | IV | II |
| (3) | IV | III | II |
| (4) | I | IV | II |

**99.** ಹಿಂದೂ ದಾರ್ಶನಿಕತೆಗಳು ಮತ್ತು ಅವುಗಳ ಸ್ಥಾಪಕರ ಹೆಸರುಗಳ ಜೋಡಿಯನ್ನು ನೀಡಿದೆ

A. ನ್ಯಾಯ – ಗೌತಮ

B. ಸಾಂಖ್ಯ – ಕಪಿಲ

C. ವೈಶೇಷಿಕ – ಕಾನಡ

D. ಯೋಗ – ಪತಂಜಲಿ

ಮೇಲಿರುವ ಜೋಡಿಗಳಲ್ಲಿ ಯಾವುದು ಸರಿ ?
ಕೆಳಗೆ ನೀಡಿರುವ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) A, B ಮತ್ತು C ಮಾತ್ರ

(4) A, B, C ಮತ್ತು D

**100.** ಈ ಕೆಳಗಿನವುಗಳ ಪೈಕಿ ಯಾವಗ್ರಹದ ಸುತ್ತಲೂ ಉಪಗ್ರಹಗಳು ಸುತ್ತುತ್ತಿಲ್ಲ ?

A. ಮಂಗಳ

B. ಶುಕ್ರ

C. ಬುಧ

D. ನೆಪ್ಚೂನ್

ಕೆಳಗೆ ನೀಡಿರುವ ಸಂಕೇತಗಳ ಸಹಾಯದಿಂದ ಸರಿಯಾದ ಉತ್ತರವನ್ನು ಆರಿಸಿ :

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) A ಮತ್ತು C ಮಾತ್ರ

(4) B ಮತ್ತು D ಮಾತ್ರ

www.shikarat.com